# ಬಸವಣ್ಣನವರ ಒಂದು ಚಾರಿತ್ರಿಕ ಅವಲೋಕನ

**ಸುವರ್ಣಾ ಪಾಟೀಲ***

**DOI: https://doi.org/10.5281/zenodo.19501642**

**ABSTRACT**

ಹನ್ನೆರಡನೇ ಶತಮಾನದ ಮಹಾನ್ ಸಮಾಜ ಸುಧಾರಕ ಬಸವಣ್ಣನವರ ಜೀವನ, ಕಲ್ಯಾಣ ಕ್ರಾಂತಿ ಹಾಗೂ ಅವರ ವ್ಯಕ್ತಿತ್ವವು ಸಾಹಿತ್ಯಕ-ಪೌರಾಣಿಕ ನೆಲೆಗಳಲ್ಲಿ ಹೇಗೆ ರೂಪುಗೊಂಡಿದೆ ಎಂಬುದರ ಸಮಗ್ರ ವಿಶ್ಲೇಷಣೆಯನ್ನು ಇಲ್ಲಿ ಮಂಡಿಸಲಾಗಿದೆ. ಇಂಗಳೇಶ್ವರ ಬಾಗೇವಾಡಿಯಿಂದ ಕೂಡಲಸಂಗಮ, ತದನಂತರ ಕಲ್ಯಾಣದವರೆಗಿನ ಬಸವಣ್ಣನವರ ಪಯಣ, ಅನುಭವ ಮಂಟಪದ ಸ್ಥಾಪನೆ ಮತ್ತು ಸಮಾನತೆಯ ಹರಿಕಾರರಾಗಿ ಅವರು ಕೈಗೊಂಡ ಸಾಮಾಜಿಕ-ಧಾರ್ಮಿಕ ಬದಲಾವಣೆಗಳನ್ನು ಇದು ದಾಖಲಿಸುತ್ತದೆ. ಜೊತೆಗೆ, ಹರಿಹರ, ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿಯಂತಹ ಕವಿಗಳು ತಮ್ಮ ಮಹಾಕಾವ್ಯಗಳಲ್ಲಿ ಬಸವಣ್ಣನವರ ಚಾರಿತ್ರಿಕ ಇತಿವೃತ್ತಾಂತಗಳನ್ನು ಪೌರಾಣಿಕ ಆವರಣದೊಂದಿಗೆ, ವಿಶೇಷವಾಗಿ ಷಟ್ಪದಿ ಹಾಗೂ ರಗಳೆಗಳ ಮೂಲಕ ಹೇಗೆ ಕಟ್ಟಿಕೊಟ್ಟಿದ್ದಾರೆಂಬುದನ್ನು ತುಲನಾತ್ಮಕವಾಗಿ ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಬಸವ ಯುಗದ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಕ ಸ್ಥಿತ್ಯಂತರಗಳ ಸೂಕ್ಷ್ಮ ಅವಲೋಕನವನ್ನು ಇದು ಒಳಗೊಂಡಿದೆ.

**KEYWORDS:** ಬಸವಣ್ಣ, ಕಲ್ಯಾಣ ಕ್ರಾಂತಿ, ಅನುಭವ ಮಂಟಪ, ಬಸವ ಪುರಾಣ, ಚಾರಿತ್ರಿಕ ಕಾವ್ಯ.

* **ಸುವರ್ಣಾ ಪಾಟೀಲ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಕೆ. ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾವಿದ್ಯಾಲಯ, ತಾಳಿಕೋಟಿ.

ಕರ್ನಾಟಕದಲ್ಲಿ 'ಬಸವಕಲ್ಯಾಣ' ನಾಡಿಗೆ ಐತಿಹಾಸಿಕವಾಗಿ, ಧಾರ್ಮಿಕವಾಗಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಏಕೆಂದರೆ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಹೊಸ ಧರ್ಮ ಉದಯವಾದ ಸ್ಥಳ; ಸಮಾಜೋ-ಧಾರ್ಮಿಕ ಕ್ರಾಂತಿಯ ಸ್ಥಳವೆಂದು ಸಹ ಗುರುತಿಸಲಾಗುತ್ತದೆ. ಕರ್ನಾಟಕದಲ್ಲಿ ಇದರಷ್ಟೇ ಮಹತ್ವದ ಇನ್ನೊಂದು ಸ್ಥಳವೆಂದರೆ ವಿಜಯಪುರ ಜಿಲ್ಲೆಯ ಇಂಗಳೇಶ್ವರ ಬಸವನ ಬಾಗೇವಾಡಿ ಒಂದು ಬಸವಣ್ಣನವರ ಜನ್ಮಭೂಮಿಯಾದರೆ, ಇನ್ನೊಂದು ಬಸವಣ್ಣನವರ ಕರ್ಮಭೂಮಿಯಾಗಿದೆ. ಈ ಸ್ಥಳಗಳು ವೀರಶೈವ ಲಿಂಗಾಯತರಿಗೆ ಪವಿತ್ರ ಸ್ಥಳಗಳಾಗಿವೆ. ಕಲ್ಯಾಣದಲ್ಲಿ ಬಸವಣ್ಣನವರು ಬಿಜ್ಜಳನ ಭಂಡಾರದ ಮಂತ್ರಿಯಾಗಿ ಹಲವಾರು ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳನ್ನು ತರಲು ಅಪಾರವಾಗಿ ಪ್ರಯತ್ನಿಸಿದರು.

ಇಂಗಳೇಶ್ವರ ಬಾಗೇವಾಡಿಯು ತರ್ದವಾಡಿ ಸಾಸಿರದ ಮುಖ್ಯ ಪಟ್ಟಣವಾಗಿ, ಅಗ್ರಹಾರವಾಗಿ ಖ್ಯಾತಿಯನ್ನು ಪಡೆದಿತ್ತು. ಕಳಚೂರಿ ಬಿಜ್ಜಳನ ಆಡಳಿತಕ್ಕೆ ಒಳಪಟ್ಟಿತ್ತು. ಈ ಅಗ್ರಹಾರದ ಮುಖ್ಯಸ್ಥನೇ ಬಸವಣ್ಣನವರ ತಂದೆ ಮಂಡಿಗೆಯ ಮಾದಿರಾಜನಾಗಿದ್ದನು. ಇಂಗಳೇಶ್ವರದ ಮಾದಲಾಂಬಿಕೆ ಬಸವಣ್ಣನವರ ತಾಯಿಯಾಗಿದ್ದಳು. ಹನ್ನೆರಡು ವರ್ಷಗಳು ಕಳೆದರೂ ಇವರಿಗೆ ಗಂಡು ಸಂತಾನದ ಭಾಗ್ಯ ಲಭಿಸಿರಲಿಲ್ಲ. ಮಾದಲಾಂಬಿಕೆಯು ನಂದಿ ವ್ರತವನ್ನು ಕೈಗೊಂಡು ಪುತ್ರ ಸಂತಾನವನ್ನು ಪಡೆಯುತ್ತಾಳೆ. ಆದ್ದರಿಂದ ಪುತ್ರನಿಗೆ ಬಸವನೆಂದು ನಾಮಕರಣ ಮಾಡುತ್ತಾರೆ. ಎಂಟನೇ ವರ್ಷಕ್ಕೆ ಬ್ರಾಹ್ಮಣ ಸಂಪ್ರದಾಯದಂತೆ ಉಪನಯನದ ಸಿದ್ಧತೆ ನಡೆದಾಗ ಅದನ್ನು ಪ್ರಶ್ನಿಸಿ ನಿರಾಕರಿಸುತ್ತಾನೆ. ಇದರಿಂದ ಬಾಗೇವಾಡಿ ಅಗ್ರಹಾರದಲ್ಲಿ ಕೋಲಾಹಲವುಂಟಾಗುತ್ತದೆ. ಆಗ ಬಸವಣ್ಣ ಮನೆಯನ್ನು ತೊರೆದು ಕೂಡಲಸಂಗಮಕ್ಕೆ ಬರುತ್ತಾನೆ. ಕಪ್ಪಡಿಯ ಸಂಗಮದಲ್ಲಿ ಅಕ್ಕನಾಗಮ್ಮ ಮತ್ತು ಶಿವದೇವ ದಂಪತಿಗಳ ಮನೆಯಲ್ಲಿ ಆಶ್ರಯ ಪಡೆಯುತ್ತಾನೆ. ಕೂಡಲಸಂಗಮದ ಜಾತವೇದ ಮುನಿಗಳ ಹತ್ತಿರ ವಿದ್ಯಾಭ್ಯಾಸ ಮಾಡುತ್ತಾರೆ. ಕಾಲಾಂತರದಲ್ಲಿ ಜಾತವೇದ ಮುನಿಗಳ ಸಲಹೆಯಂತೆ ಒಲ್ಲದ ಮನಸ್ಸಿನಿಂದ ಮಂಗಳವೇಡಕ್ಕೆ ಹೋಗುತ್ತಾರೆ. ಕಳಚೂರಿ ಬಿಜ್ಜಳನ ಆಸ್ಥಾನದಲ್ಲಿ ಇವರ ಸೋದರ ಮಾವಂದಿರಾದ ಬಲದೇವ ಮತ್ತು ಸಿದ್ಧರಸರು ಮಂತ್ರಿಗಳಾಗುತ್ತಾರೆ.

ಬಸವಣ್ಣ ಅಲ್ಲಿ ಕರಣಿಕ ವೃತ್ತಿಗೆ ಸೇರಿಕೊಳ್ಳುತ್ತಾರೆ. ಬಲದೇವನ ಮಗಳು ಗಂಗಾಂಬಿಕೆಯೊಂದಿಗೆ ಮದುವೆಯಾಗುತ್ತದೆ. ನಂತರ ಸಿದ್ಧರಸ ಮತ್ತು ಸಿದ್ಧರಸನ ಮಡದಿ ತೀರಿಕೊಂಡ ಮೇಲೆ ಅವರ ಮಗಳು ನೀಲಾಂಬಿಕೆ ಅನಾಥಳಾಗಿದ್ದರಿಂದ ಬಿಜ್ಜಳನು ಸಾಕು ತಂಗಿಯೆಂದು ಪರಿಭಾವಿಸಿ ಬಸವಣ್ಣನೊಂದಿಗೆ ಅವರ ವಿವಾಹ ಮಾಡುತ್ತಾರೆ. ಕಳಚೂರಿ ಬಿಜ್ಜಳನು ಕಲ್ಯಾಣಿ ಚಾಲುಕ್ಯರನ್ನು ಸೋಲಿಸಿ ತನ್ನ ರಾಜಧಾನಿಯನ್ನು ಮಂಗಳವೇಡದಿಂದ ಕಲ್ಯಾಣಕ್ಕೆ ಸ್ಥಳಾಂತರಿಸುತ್ತಾರೆ. ಅನುಭವ ಮಂಟಪ ನಿರ್ಮಿಸಿ ವಚನ ಸಾಹಿತ್ಯದ ರಚನೆಗೆ ಇಂಬು ನೀಡುತ್ತಾರೆ. ಮಹಾಮನೆ ಕಟ್ಟಿಸಿ ನಿತ್ಯ 1,96,000 ಶಿವಗಣಂಗಳಿಗೆ ದಾಸೋಹ ಮಾಡುತ್ತಾರೆ. ದಾಸೋಹ ಮತ್ತು ಕಾಯಕ ತತ್ವಗಳಿಂದ ಬಸವಣ್ಣನವರ ಕೀರ್ತಿ ದಶ ದಿಕ್ಕುಗಳಿಗೆ ಹಬ್ಬುತ್ತದೆ. ಜಾತಿವ್ಯವಸ್ಥೆಯನ್ನು ನಿರ್ಮೂಲನಗೊಳಿಸಲು ಮತ್ತು ಸಮಾನತೆಯನ್ನು ತರಲು ಪ್ರಯತ್ನಿಸುತ್ತಾರೆ. ಲಿಂಗಾಯತ ಧರ್ಮದ ಪ್ರಕಾರ ಶರಣರೆಲ್ಲ ಒಂದೇ ಜಾತಿಯೆಂದು ತಿಳಿದು ಕೆಳಜಾತಿಯ ಹರಳಯ್ಯನ ಮಗನೊಂದಿಗೆ ಬ್ರಾಹ್ಮಣ ಮಧುವರಸನ ಮಗಳ ವಿವಾಹವಾಗುತ್ತದೆ. ಇದೇ ಕಲ್ಯಾಣ ಕ್ರಾಂತಿಗೂ ಮೂಲ ಕಾರಣವಾಗುತ್ತದೆ. ಕೊಂಡಿಮಂಚಣ್ಣ ಮೊದಲಾದ ವೈದಿಕ ಪಂಡಿತರು ಬಿಜ್ಜಳನ ತಲೆತುಂಬಿದ್ದರಿಂದ ಮಧುವರಸ ಮತ್ತು ಹರಳಯ್ಯರಿಗೆ ಮರಣದಂಡನೆಯನ್ನು, ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗುವಂತೆ

ಮಾಡುತ್ತಾರೆ. ಬಸವಣ್ಣನ ಕಟ್ಟಾ ಅನುಯಾಯಿಗಳಾಗಿದ್ದ ಶರಣರಾದ ಮಲ್ಲಿಬೊಮ್ಮ ಮತ್ತು ಜಗದೇವ ಬಿಜ್ಜಳನ ಕೊಲೆ ಮಾಡುತ್ತಾರೆ. ಬಸವಣ್ಣ ಕೂಡಲಸಂಗಕ್ಕೆ ಬಂದು ಐಕ್ಯರಾಗುತ್ತಾರೆ. ಹೀಗೆ ಬಸವಣ್ಣನವರ ಚಾರಿತ್ರಿಕ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹರಿಹರನನ್ನು ಮೊದಲುಗೊಂಡು ಇತರ ಕವಿಗಳ ವಚನಕಾರರ ದಟ್ಟಪ್ರಭಾವಕ್ಕೆ ಒಳಗಾಗಿ ಕಾವ್ಯರಚನೆ ಮಾಡಿದರು. ಮುಖ್ಯವಾಗಿ ಹರಿಹರನು ತನ್ನ ಕಾವ್ಯಗಳ ವಸ್ತುವಿನ ಆಯ್ಕೆಯಲ್ಲಿ, ಛಂದಸ್ಸಿನ ಆಯ್ಕೆಯಲ್ಲಿ, ತನ್ನ ಕಾವ್ಯ ನಾಯಕರನ್ನಾಗಿ ಆರಿಸಿಕೊಂಡ ಕೆಳವರ್ಗದ ವ್ಯಕ್ತಿಗಳ ಬಗ್ಗೆ ತೋರಿದ ಗೌರವಾಗಲಿ, ವಿಶಾಲ ದೃಷ್ಟಿಯಲ್ಲಿ ಜನಪರವಾದ ಕಾವ್ಯ ದೃಷ್ಟಿಯನ್ನು ತೋರಿದ್ದಾನೆ. ಆದರೆ, ಕಾಲ ಸರಿದಂತೆ ಮುಂದಿನ ವೀರಶೈವ ಕವಿಗಳು ಈ ಆದರ್ಶದಿಂದ, ದೂರ ಸರಿಯುತ್ತ ನಡೆದರು. ರಾಘವಾಂಕನೇ ಅದನ್ನು ಪ್ರಾರಂಭ ಮಾಡಿದ. ಕನ್ನಡ ಷಟ್ಪದಿಯನ್ನು ಆರಿಸಿಕೊಂಡದ್ದು ನಿಜ. ಆದರೆ "ಹರಿಹರನಂತೆ ರಗಳೆಯ ಹೊಸ ಹೊಸ ದಾರಿ ತುಳಿಯದೆ, ಪುರಾಣದ ಚಾರಿತ್ರಿಕ ರಚನೆಗೆ ಕೈ ಹಾಕಿದ. ಅವನಿಂದ ಪ್ರಾರಂಭವಾದ ಈ ಬಗೆಯು ಷಡಕ್ಷರದೇವನಂತಹವರಲ್ಲಿ ಘನೀಭೂತವಾಯಿತು" ಎಂದು ಪಿ. ವಿ. ನಾರಾಯಣರವರು ಹೇಳಿರುವುದು ಔಚಿತ್ಯಪೂರ್ಣವಾದುದು. ಮುಂದೆ ಕನ್ನಡದ ಕಾವ್ಯ ಸ್ರೋತವು ರಾಘವಾಂಕನಲ್ಲಿ ಹುಟ್ಟಿದ 'ಷಟ್ಪದಿ' ರೂಪದ 'ಚಾರಿತ್ರಿಕ ಕಾವ್ಯ'ಗಳ ಸ್ವರೂಪವು ವೀರಶೈವ ಪುರಾಣ ಕವಿಗಳ ಕಾವ್ಯಕೃಷಿಗೆ ಪ್ರೇರಣೆಗಳನ್ನು ನೀಡಿ ಉತ್ತುಂಗಕ್ಕೇರಿಸಿತು. ಷಟ್ಪದಿಯಲ್ಲಿ ವಚನ ಚಾರಿತ್ರ್ಯಗಳನ್ನು ನಿರೂಪಿಸಲು ಸಾಧ್ಯವೆಂಬುದು ಭೀಮಕವಿಯು 'ಬಸವಪುರಾಣ' ವನ್ನು ಬರೆಯುವುದರ ಮೂಲಕ ಪರಂಪರೆಯನ್ನು ಮುಂದುವರೆಸಿದ ಎಂಬ ಅಭಿಪ್ರಾಯವು ಕೂಡ ಅಷ್ಟೇ ಮುಖ್ಯವಾದುದು. ಹೀಗೆ ವಚನ ಪರಿಭಾಷೆಯು ತನ್ನ ಪೂರ್ವ ಮತ್ತು ಉತ್ತರಾರ್ಧಗಳ ಮಧ್ಯದಲ್ಲಿ ವಿಶಿಷ್ಟತೆಯನ್ನು ಮೆರೆದ ವಿಚಾರವಾಗಿ ಉಳಿದಿದೆ.

ಶಿವ, ಜಂಗಮ, ವೀರಶೈವ ಪದಗಳನ್ನು ಪಾರಿಭಾಷಿಕವೆಂದು ಪರಿಗಣಿಸಿ ಅವುಗಳ ಪ್ರಾಚೀನತೆಯನ್ನು ಹುಡುಕುತ್ತ ಶಿವಾಚಾರಗಳಲ್ಲಿ ಇರುವ ವೈವಿಧ್ಯತೆ ಮತ್ತು ಶೈವ ಪರಂಪರೆಗಳನ್ನು ಪರಿಷ್ಕರಿಸಿಕೊಳ್ಳುವ ಪ್ರಯತ್ನವನ್ನು ಈ ಸಂದರ್ಭದಲ್ಲಿ ನಡೆಸಿದ್ದೇನೆ. 'ವೀರಶೈವ' ಎಂಬ ಪದವು ಬಸವನಿಗಿಂತ ಹಿಂದೆಯೇ 'ಪಂಥ'ಕ್ಕೆ ಇಟ್ಟಿರುವ ಹೆಸರೆಂಬುದು ಇಲ್ಲಿ ಮುಖ್ಯವಾದ ಅಂಶವಾಗಿ ಪರಿಗೃಹೀತವಾಗುತ್ತದೆ. ಆದರೆ ಬಸವನು ಈ ಪಂಥಕ್ಕೆ ವಿಶೇಷವಾದ ಮಹತ್ವವನ್ನು ಕೊಟ್ಟು ಬೆಳೆಸಿ, ಪ್ರಚಾರಕ್ಕೆ ತಂದನೆಂಬುದನ್ನು ಸಹೃದಯ ಭಾವದಿಂದ ಸ್ವೀಕರಿಸಲಡ್ಡಿಯಿಲ್ಲ. ಇಲ್ಲಿ ಶೈವ ಸಿದ್ಧಾಂತಗಳ ಅಥವಾ ಪಂಥಗಳನ್ನು ಹುಡುಕುವ ಪ್ರಯತ್ನಗಳು ಮಾತ್ರ ನಡೆದಿದ್ದು ಆಯಾ ಪಂಥಗಳ ಗುಣಲಕ್ಷಣಗಳ ಕಡೆ ನಮ್ಮ ಗಮನವು ಹರಿದಿಲ್ಲವೆಂಬುದು ಅಷ್ಟೆ ಸ್ಪಷ್ಟವಾಗಿದೆ ಎಂದು ಭಾವಿಸಿದ್ದೇನೆ.

'ಷಟ್ಸ್ಥಲಗಳು' ವಚನ ಪರಿಭಾಷೆಯಲ್ಲಿ ಶಾಸ್ತ್ರೀಯ ಅರ್ಥ ಪ್ರವೃತ್ತಿಯನ್ನು ಪಡೆದುಕೊಂಡಿರಬಹುದಾದ ಕುರುಹುಗಳನ್ನು ಹುಡುಕುವ ಪ್ರಯತ್ನವನ್ನು ನಡೆಸಿ, ಆ ಮೂಲಕ ಶೈವ ಮತ್ತು ವೀರಶೈವ ಧರ್ಮದ ನಡುವೆ ಇರಬಹುದಾದ ಷಟ್ಚಕ್ರ ಪರಿಕಲ್ಪನೆಯನ್ನು ಕುರಿತಾದ ಅಂತಃಸಂಬಂಧವನ್ನು ಗುರುತಿಸಿಕೊಳ್ಳಲೆತ್ನಿಸಿದ್ದೇನೆ. ವೀರಶೈವ ಧರ್ಮದ ಪ್ರವರ್ತಕರಾದ ಬಸವಣ್ಣನು ಸಮಾಜೋ-ಧಾರ್ಮಿಕ ಮತ್ತು ನೈತಿಕ ಹೊಣೆಗಾರಿಕೆಯನ್ನು ಪೂರೈಸಿದ ಬಗೆಯನ್ನು ಮತ್ತು ಆತನ ವಚನಗಳಲ್ಲಿ ಕಂಡುಬರುವ ತಾತ್ವಿಕ ಚಿಂತನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದೇನೆ. ಸಮಕಾಲೀನ ಶರಣರು ಬಸವನ ಬಗ್ಗೆ ತೋರಿರುವ ಗೌರವಾದರಣೆಗಳನ್ನು ಅವಲೋಕಿಸುವ ಮೂಲಕ ವಚನ ಪರಿಸರದಲ್ಲಿ ಬಸವನ ಧಾರ್ಮಿಕ

ವ್ಯಕ್ತಿತ್ವವನ್ನು ಸಂಗ್ರಾಹ್ಯವಾದ ವಿಚಾರಗಳೊಂದಿಗೆ ಕಟ್ಟಿಕೊಡಲೆತ್ನಿಸಲಾಗಿದೆ.

ಮಾರ್ಗ ಸಾಹಿತ್ಯದ ಹಿನ್ನೆಲೆಯಲ್ಲಿ ದೇಸಿ ನಿರ್ವಚನವನ್ನು ಪುರಾಣ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಜೈನ ಕವಿಗಳಿಂದ ಆರಂಭಿಸಿ ಮಧ್ಯಕಾಲೀನ ಕವಿಗಳಾದ ಹರಿಹರ, ಪಾಲ್ಕುರಿಕೆ ಸೋಮನಾಥ, ಸಿಂಗಿರಾಜ, ಲಕ್ಕಣ್ಣದಂಡೇಶ, ಭೀಮಕವಿಗಳನ್ನು ಪ್ರಧಾನವಾಗಿ ಪರಿಗಣಿಸಿ ಅವರ ಯುಗಧರ್ಮ ಮತ್ತು ಮನೋಧರ್ಮಗಳ ನಡುವೆ ಕನ್ನಡ ಸಾಹಿತ್ಯ ಮಾರ್ಗದಲ್ಲಿ ಆದ ಛಂದೋ ಪ್ರಯೋಗಗಳು ಮತ್ತು ಅವರ ಸೃಜನಶೀಲ ಬರಹಗಳ ಮೇಲೆ ವಿಶೇಷವಾದ ಗಮನವನ್ನು ಹರಿಸಿದ್ದೇನೆ. ಆ ಮೂಲಕ ಕೃತಿಕೇಂದ್ರಿತ ವಿಚಾರಗಳಿಗೆ ಒಂದು ಸಂವಿಧಾನವನ್ನು ಹಾಕಿಕೊಳ್ಳುವ ಯತ್ನವು ಇಲ್ಲಿ ನಡೆದಿದೆ.

ಕಾವ್ಯದಲ್ಲಿ ಬಳಕೆಯಾಗುವ ವೇದ ವಾಕ್ಯಗಳು, ಶಾಸ್ತ್ರಾಗಮಗಳು, ಉಕ್ತಿಗಳು, ವೇದ ಪ್ರಮಾಣವಾದ ಚಾರಿತ್ರಿಕ ಲಕ್ಷಣಗಳು ಭಾಷೆಯ ಲಾಲಿತ್ಯಗತಿ, ಪುರಾಣ–ಸಾಹಿತ್ಯ–ಅನುಭಾವಗಳಿಂದ ಪರಿಪಕ್ವಗೊಂಡ ಮಹಾಕಾವ್ಯಗಳನ್ನು ಪಾಲ್ಕುರಿಕೆ ಸೋಮನಾಥನು ಬಸವ ಪುರಾಣವನ್ನು ಕರ್ನಾಟಕಾಂಧ್ರ ಜನತೆಗೆ ಕೊಡುಗೆಯಾಗಿ ಕೊಟ್ಟು ಇಂದಿಗೂ 'ಸರ್ವಜ್ಞ'ನಾಗಿ ಉಳಿದಿದ್ದಾನೆ. ಒಟ್ಟಿನಲ್ಲಿ ಸೋಮನಾಥನ ತೆಲುಗು ಬಸವ ಪುರಾಣಮು ಹಾಗೂ ಭೀಮಕವಿಯ ಕನ್ನಡ ಬಸವಪುರಾಣಗಳಲ್ಲಿ ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತೆ ಹಲವಾರು ಚಾರಿತ್ರಿಕ ಅಂಶಗಳು ಸೇರಿಕೊಂಡಿವೆ.

ಸೋಮನಾಥ ಮತ್ತು ಭೀಮಕವಿಗಳ ಕೃತಿಗಳಲ್ಲಿ ವಿಶಿಷ್ಟವಾದ ಶೈಲಿಯ ಧಾರಾಳತನ, ಮಾಧುರ್ಯ, ಮಾರ್ದವಗಳಿವೆ. ಪಾಂಡಿತ್ಯದ ಆವೇಶವು, ಸರಳ ಭಾವುಕತೆಯ ಅನುನಯವೂ, ವಿಷಯವನ್ನು ಲಂಬಿಸಿ ಹೇಳುವ, ಸಿದ್ಧಾಂತ ಭೂಯಿಷ್ಠವಾಗಿ ನಿರೂಪಿಸುವ ಸಹಜತೆಯು, ಸೋಮನಾಥನ ಲಘುಕಾವ್ಯ ಪದ್ಧತಿ ಮತ್ತು ಭೀಮಕವಿಯ ಭಾಮಿನಿ ಷಟ್ಪದಿಯ ಸಹಜ ಲಾಲಿತ್ಯಕ್ಕೆ ಪ್ರೇರಕವಾಗಿ ಬಂದಿದೆ.

ಬಸವಪುರಾಣದ ಬಸವನ ಜೀವಿತ ಸಂಗತಿಗಳನ್ನು ಗದ್ಯದಲ್ಲಿ ಸಂಗ್ರಹಿಸಿಕೊಂಡಿದ್ದೇನೆ. ಬಸವನ ಸಂಕ್ಷಿಪ್ತ ಚಾರಿತ್ರ್ಯವನ್ನು ಇಡಿಯಾಗಿ ನೋಡಲು ಸಹಾಯಕವಾಗಲೆಂಬ ಪ್ರಯತ್ನವಿದೆ. ಆದರೆ ಸುಮಾರು 8 ಕಾಂಡಗಳು, 63 ಸಂಧಿಗಳು, 3562 ಷಟ್ಪದಿಗಳಿಂದ ಕೂಡಿದ ಈ ಬೃಹತ್ಕಾವ್ಯವನ್ನು ಅಕ್ಷರಶಃ ಕಾವ್ಯ ಕಥನವನ್ನು ಬಸವನ ಉತ್ಥಾನಕ್ಕೆ ಮಾತ್ರ ಸೀಮಿತಗೊಳಿಸಿ ಕಾವ್ಯಗಳನ್ನು ಸಮೀಕ್ಷಿಸಿದ್ದೇನೆ.

ಒಟ್ಟಿನಲ್ಲಿ ಒಂದು ಧರ್ಮವು ಬಹಿರಂಗವಾಗಿ ತನ್ನ ಸಿದ್ಧಾಂತ, ತತ್ವ, ನಿಯಮಗಳನ್ನು ಆಕರ್ಷಕವಾಗಿ ಹೇಳಿ ಮೆಚ್ಚುಗೆಗೆ ಪಾತ್ರವಾಗುವುದು ಎಷ್ಟು ಮುಖ್ಯವೋ, ಹಾಗೆಯೇ ತನ್ನ ಧಾರ್ಮಿಕ ಸಿದ್ಧಾಂತಗಳಿಗೆ ಅಂತರ್ಮುಖಿಯಾಗಿ ಪೌರಾಣಿಕ ವಿನ್ಯಾಸಗಳನ್ನು ಕಟ್ಟಿಕೊಳ್ಳುವುದು ಕೂಡ ಅಷ್ಟೇ ಮುಖ್ಯವಾದುದೆಂದು ಭಾವಿಸಿದ್ದೇನೆ. ಜೈನಧರ್ಮವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ವೈದಿಕ ಪುರಾಣ ಪಾತ್ರಗಳನ್ನು ಹೀಗೆ ಸ್ವೀಕರಿಸಿ ಪೌರಾಣಿಕ ಅಡಿಪಾಯವನ್ನು ಹಾಕಿಕೊಂಡಿತು. ಆದರೆ, ಮಧ್ಯಕಾಲೀನ ವಚನಯುಗವು ಸ್ವಯಂ ಕೃಪೆಯಿಂದ ಕೇವಲ ಶೈವಪುರಾಣ ಲಕ್ಷಣಗಳನ್ನು ಮೇಳವಿಸಿಕೊಂಡು ತನ್ನ ಧರ್ಮಕ್ಕೆ ವಿಶಿಷ್ಟವೆಂಬಂತೆ ಪೌರಾಣಿಕವಾದ ಅಡಿಪಾಯವನ್ನು ಹಾಕಿಕೊಂಡಿತು. ಆದ್ದರಿಂದಲೇ ಬಸವಣ್ಣನವರ ಜನನವನ್ನು ವೀರಶೈವ ಕವಿಗಳು ಅವತಾರಿ ಪುರುಷನಂತೆ ಚಿತ್ರಿಸಿದ್ದಾರೆ.

ಇದುವರೆಗಿನ ಈ ಅಧ್ಯಯನದಲ್ಲಿ ಸೋಮನಾಥ ಮತ್ತು ಭೀಮಕವಿಗಳಿಬ್ಬರು ಬಸವಣ್ಣನ ಇತಿವೃತ್ತಾಂತಗಳಿಗೆ ಪೂರಕವೆಂಬಂತೆ ಇತರ ವಚನಕಾರರ ಸಂದರ್ಶನ,

ಪರಸ್ಪರ ಪ್ರಭಾವಗಳನ್ನು ಬಳಸಿ ಮಹಾಕಾವ್ಯಗಳನ್ನು ರಚಿಸಿರುವ ವಿಧಾನವನ್ನು ಪೂರಕವಾಗಿ ಅಧ್ಯಯನಕ್ಕೆ ಗುರಿಪಡಿಸಲಾಯಿತು. ಈ ಎರಡು ಕೃತಿಗಳು ಬಾಹುಳ್ಯತೆಯನ್ನು ಹೊಂದಿರುವುದರಿಂದ ಅಧ್ಯಯನದ ಮಿತಿಯು ಮೀರಿರುವುದು ಸರ್ವವೇದ್ಯವಾಗಿದೆ. ಈ ಕಾರಣದಿಂದಾಗಿ ಬಸವಣ್ಣನ ಇತಿ-ವೃತ್ತಾಂತಗಳನ್ನು ಪ್ರಧಾನವಾಗಿ ಆಯ್ಕೆ ಮಾಡಿಕೊಂಡು ಕಾವ್ಯದ ಸ್ರೋತಗಳನ್ನು ಚರ್ಚೆಗೆ ಹೊಂದಿಸಿಕೊಂಡಿದ್ದೇನೆ. ಕರ್ನಾಟಕ ಸಂಸ್ಕೃತಿಯ ಇತಿಹಾಸದಲ್ಲಿ ಮಹೋಜ್ವಲವೂ, ಪರಿಣಾಮಕಾರಿಯೂ, ವಿಶಿಷ್ಟವೂ, ಶ್ರೇಷ್ಠವೂ ಆದ ಕಾಲವೆಂದರೆ ಅದು ಶರಣರು ಬದುಕಿದ ಬಸವಯುಗವೆಂದರೆ ಅತಿಶಯೋಕ್ತಿಯಾಗಲಾರದು. ಅಂದಿನ ಸಮಾಜದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ನೈತಿಕ, ರಾಜಕೀಯ ಸ್ಥಿತಿಗತಿಗಳನ್ನು ಅವರ ಸಾಮಾಜಿಕ ಸಂಬಂಧಗಳನ್ನು ಪರಿಶೀಲಿಸಲಾಗಿದೆ.

## ಪರಾಮರ್ಶನ ಗ್ರಂಥಗಳು:


1. ಅಕ್ಕ ಅನ್ನಪೂರ್ಣತಾಯಿ, (2020), ಬಸವಲಿಂಗ ಪ್ರಾರ್ಥನೆ ಹಾಗೂ ಭಕ್ತಿ ಗೀತೆಗಳು, ಬೀದರ: ಬಸವ ಸಂಪದ ಪ್ರಕಾಶನ.
2. ಅಂಗಡಿ ಎಸ್. ಎಸ್., (2008), ವಚನ ಸಾಹಿತ್ಯ ಛಂದೋಲಯ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಅನಂತಮೂರ್ತಿ ಯು. ಆರ್., (2003), ವೀರಶೈವಧರ್ಮ ದರ್ಶನ (ಸಂಪುಟ 1-2), ಮೈಸೂರು: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.
4. ಅಮರೇಶ ನುಗಡೋಣಿ (ಸಂ.), (2010), ಅಲ್ಲಮಪ್ರಭು ವಚನಗಳ ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಅರ್ಚನಾ ಅಥಣಿ, (2021), ಅಕ್ಕಮಹಾದೇವಿಯ ವಚನಗಳ ಮೀಮಾಂಸೆ, ಬೆಂಗಳೂರು: ಅಕ್ಷರ ಮಂಟಪ ಪ್ರಕಾಶನ.
6. ಅಯ್ಯನಗೌಡರ ಎಸ್. ವ್ಹಿ., (2014), ಆಧುನಿಕ ಜಗತ್ತಿಗೆ ಶ್ರೀ ಬಸವೇಶ್ವರ ಹೊಸ ಸಂದೇಶ, ಧಾರವಾಡ: ಅನುಗ್ರಹ ಪ್ರಕಾಶನ.
7. ಅಪರಾಜ ಆರ್. ಪಿ., (2014), ಲಿಂಗಾಯತ ಸಮಾಜ-ಸಂಸ್ಕೃತಿ, ಬೆಳಗಾವಿ: ವಚನ ಅಧ್ಯಯನ ಕೇಂದ್ರ, ನಾಗನೂರು ಶ್ರೀ ರುದ್ರಾಕ್ಷಿಮಠ.
8. ಕಲಬುರ್ಗಿ ಎಂ. ಎಂ., (1978), ಶಾಸನಗಳಲ್ಲಿ ಶಿವಶರಣರು, ಗದಗ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ.
9. ಕಲ್ಯಾಣಮ್ಮ ಲಂಗೋಟಿ, (2019), ವಿಚಾರ ಪತ್ನಿ ಶರಣೆ ಗಂಗಾಂಬಿಕೆಯವರು, ರಾಮದುರ್ಗ: ಜಗಜ್ಯೋತಿ ಬಸವೇಶ್ವರ ಅನುಭಾವಪೀಠ.
10. ಕಲಬುರ್ಗಿ ಎಂ. ಎಂ., (1993), ಬಸವಣ್ಣನವರ ವಚನ ಸಂಪುಟ-1, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
11. ಕಲಬುರ್ಗಿ ಎಂ. ಎಂ. (ಸಂ.), (1999), ಹರಿಹರನ ರಗಳೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.